ಚೋಂಗನ ಎದೆ ಧಸಕ್ಕೆಂದಿತ್ತು. "ಇದೆಂಥ ಕಾಲ ಬಂತಪ್ಪ".

ಒಂದು ವಾರ ಬಿಟ್ಟು ಮತ್ತದೇ ಶಬ್ದ. ಪುನಃ ನೀರ ಗುಂಡಿಗೆ ಸ್ಫೋಟಕ ಹಾಕಿ ಮೀನು ಹಿಡಿಯುತ್ತಿದ್ದುದನ್ನು ಚೋಂಗ ಗಮನಿಸಿ ಮನದಲ್ಲೇ ಯೋಚಿಸಿದ. ಏನಾದರೊಂದು ಮದ್ದು ಅರೆಯಲೇಬೇಕು. ಆ ರಸ್ತೆ ಕೆಲಸದವರ ಬಿಡಾರ ಹೊಳೆಯಿಂದ ಅನತಿ ದೂರದಲ್ಲಿತ್ತು. ರಾತ್ರೆ ಬೆಳಿಗ್ಗೆ ಆಗಾಗ ಕೆಲಸದವರು ಪಾತ್ರೆ ತೊಳೆಯಲು, ದೇಹಬಾಧೆ ತೀರಿಸಲು ನದಿ ಹತ್ತಿರ ಬರುತ್ತಿದ್ದುದನ್ನು ಚೋಂಗ ಗಮನಿಸಿದ್ದ. ಇದೇ ಸುಸಮಯ ಎಂದೆಣಿಸಿ ಒಂದು ದಿನ ಕಾಯುತ್ತ ಕುಳಿತ. ಆ ಒಂದು ರಾತ್ರಿ ಸಣ್ಣ ಮಿಣಿ ಮಿಣಿ ಟಾರ್ಚು ಬೆಳಕಲ್ಲಿ ಓರ್ವ ನದಿ ಕಡೆಗೆ ಬರುತ್ತಿದ್ದುದನ್ನು ನೋಡಿದವನೇ ತೆಂಗಿನ ಗರಿಗಳ ದೊಡ್ಡ ಸೂಟೆ, ಬೆಂಕಿ ಪೊಟ್ಟಣ ಹಿಡಿದು ಕತ್ತಲಲ್ಲೆ ನದಿದಂಡೆ ಕಡೆಗೆ ದೌಡಾಯಿಸಿದ. ಪಾಪ ಪಳನಿಯಪ್ಪ ಮಲ ವಿಸರ್ಜಿಸಲು ಚಿಕ್ಕ ಬಂಡೆ ಮೇಲೆ ಕುಳಿತುಕೊಂಡಿದ್ದ. ಅವನ ಎದುರಿನ ನೀರಿನ ಗುಂಡಿಗೆ ದಢಂ ದುಢುಂ ಕಲ್ಲುಗಳು ಬಿದ್ದ ಶಬ್ದವಾಗಿ ಸಣ್ಣಗೆ ನಡುಗಿ ಆಚೆ ಈಚೆ ಟಾರ್ಚು ಬೆಳಕು ಬೀರಿ ಭಯದಿಂದಲೇ ಮುದುಡಿ ಕುಳಿತುಕೊಂಡಿದ್ದ. ಇದ್ದಕ್ಕಿದ್ದಂತೆ ಸರಿಯಾಗಿ ಅವನೆದುರಿಗೆ ಆಚೆ ದಡದಿಂದ ವಿಕಾರವಾಗಿ ಅರಚಿದ ಶಬ್ದ. ಸಣ್ಣಗೆ ಬೆಂಕಿ ಕಡ್ಡಿಗೀರಿದಂತೆ ಮೊದಲು ಬೆಳಕು ಕಂಡರೆ ಒಮ್ಮೆಲೆ ಸೂಟೆಯೊಂದು ಇದ್ದಕ್ಕಿದ್ದಂತೆ ಹೊತ್ತಿ ಉರಿದು ಅತ್ತಿತ್ತ ಮೇಲೆ ಕೆಳಗೆ ಓಡಾಡತೊಡಗಿದೆ. ತನ್ನ ಎದುರಿಗೆ ಸೂಟೆ ಹೊಳೆ ದಾಟಿ ಈಚೆಗೆ ಬರುತ್ತಿರುವಂತೆ ಅವನಿಗೆ ಇದಾವುದೋ ಹಾಳು ದೆವ್ವ ಇರಬೇಕು ಎಂದೆನಿಸುತ್ತಿದ್ದಂತೆ ಮತ್ತೊಮ್ಮೆ ವಿಕಾರ ಕೂಗು. ತನ್ನ ಕಾರ್ಯದಿಂದ ಅರ್ಧದಿಂದಲೇ ಪಳನಿಯಪ್ಪ ಗಡ ಗಡ ನಡುಗುತ್ತ ಓಡಿ ಬಿಡಾರ ಸೇರಿದ್ದಾನೆ. ನಡುಗುತ್ತ ಏದುಸಿರು ಬಿಡುತ್ತಾ ಅವನ ನಾಲಗೆ ಮಾತನಾಡಲು ತಡವರಿಸುತ್ತಿತ್ತು. ಅಲ್ಲಿದ್ದವರಿಗೆ ಗಡಿಬಿಡಿ. ಬಿಡಾರದಲ್ಲಿದ್ದವರಿಗೆ ಅದು ಹೇಗೋ ವಿಷಯವನ್ನು ತಿಳಿಸುತ್ತಾ ಹೆದರಿ ಕಂಗಾಲಾಗಿದ್ದ ಆತ ಕುಸಿದುಬಿದ್ದ. ಅಲ್ಲೇ ಇದ್ದ ನೀರಲ್ಲಿ ಹೇಗೋ ಅವನನ್ನು ಶುಚಿಗೊಳಿಸಿ ಮಲಗಿಸಿದರು. ಪಳನಿಯಪ್ಪನಿಗೆ ಜ್ವರ ಏರಿ ಇಡೀ ರಾತ್ರಿ ನರಳಾಟ, ಏನೇನೋ ತೊದಲು ಮಾತು. ಜತೆಗಿದ್ದವರು ಬಟ್ಟೆಯ ತುಣುಕಲ್ಲಿ ಈಡಿನ ಹಣ ಕಟ್ಟಿ ಮುರುಗನ್ ದೇವರ ಪ್ರಾರ್ಥಿಸಿ ತೆಗೆದಿಟ್ಟರು.

ಮೂರು ದಿನ ಕಳೆದರೂ ಪಳನಿಯಪ್ಪನ ಜ್ವರ ಇಳಿಯಲೇ ಇಲ್ಲ. ರಸ್ತೆ ಕೆಲಸದ ಮೇಸ್ತ್ರಿ ಅವನನ್ನು ವೈದ್ಯರಲ್ಲಿಗೆ ಕರೆದುಕೊಂಡು ಹೋಗಿ ಏನೇನೋ ಮಾತ್ರೆಗಳ ಕೊಡಿಸಿದರು. ಆದರೂ ಆತ ಗುಣಮುಖವಾಗದಿದ್ದು ಕಂಡು ಜತೆಗಾರನೊಬ್ಬನ ನೆರವಿನೊಂದಿಗೆ ಕೊಯಮತ್ತೂರಿನ ಅವನೂರಿಗೆ ಕಳುಹಿಸಿಕೊಟ್ಟರು. ಅಂದಿನಿಂದ ರಸ್ತೆ ಕೆಲಸಗಾರರಿಗೆ ಹೊಳೆ ಬದಿಗೆ ಹೋಗಲು ಹೆದರಿಕೆ. ದೆವ್ವ, ಪೀಡೆ, ಪಿಶಾಚಿ ಏನೇನೋ... ಒಂದು ದಿನ ಮೇಸ್ತ್ರಿ ಹತ್ತಿರ "ಊರಿಗೆ ಹೋಗುತ್ತೇವೆ" ಎಂದರು. ಮೇಸ್ತ್ರಿಗೆ ಪೀಕಲಾಟ. ಅವರೆಲ್ಲ ಊರಿಗೆ ಹೋದರೆ ಕೆಲಸದವರನ್ನು ಎಲ್ಲಿಂದ ತರುವುದು? ಸ್ಥಳೀಯ ಕೂಲಿಗಳಿಗೆ ರಸ್ತೆ ಕೆಲಸದ ಕೌಶಲಗಳೇ ಗೊತ್ತಿಲ್ಲ. ಅವರನ್ನು ಕರೆದರೆ ಸದಾ ಜೊತೆಗಿರಬೇಕು, ಸಂಬಳ ಬೇರೆ ಹೆಚ್ಚು ಕಕ್ಕಬೇಕು. ಆ ಮೇಸ್ತ್ರಿ ಕೆಲಸದವರನ್ನು ಪುಸಲಾಯಿಸ ಹತ್ತಿದ. ಕೊನೆಗೆ ರಸ್ತೆ ಕೆಲಸದವರು "ನಮಗೆ ಪೇಟೆಯಲ್ಲಿ ಬಿಡಾರ ಮಾಡಿದರೆ ಮಾತ್ರ ಕೆಲಸವನ್ನು ಮುಂದುವರಿಸುತ್ತೇವೆ" ಎಂದುದಕ್ಕೆ ಮೇಸ್ತ್ರಿ ಒಪ್ಪಿಕೊಂಡ. ಆದರೆ ಕೆಲಸದವರನ್ನು ಎರಡೂ ಹೊತ್ತು ಪೇಟೆಯಿಂದ ಕೆಲಸದ ಜಾಗಕ್ಕೆ ಕರೆತಂದು ಸಂಜೆ ಬಿಡಬೇಕಾಗಿ ಬಂದುದು ಅವನಿಗೆ ಖರ್ಚಿನ ಬಾಬ್ತು ಹೆಚ್ಚಿಸಿತು.

ಎಲ್ಲವನ್ನೂ ಪಟಪಟನೆ ಹೇಳುತ್ತಾ ಒಮ್ಮೆ ಚೋಂಗನ ತುಟಿಯಂಚಿನಲ್ಲಿ ನಗುವೊಂದು ಹಾದು ಹೋಗಿ ಸಭಾಂಗಣದಲ್ಲಿ ಇದ್ದವರು ನಕ್ಕು ಸುಮ್ಮನಾದರು.

ಆ ಹೊಳೆಯ ಇಕ್ಕೆಲಗಳಲ್ಲಿ ಚಳ್ಳಾರ ಮರಗಳು ಮುಗಿಲೆತ್ತರಕ್ಕೆ ಚಿಮ್ಮಿ ಬೆಳೆದಿದ್ದವು. ಹೇಮಂತದ ಹೊತ್ತಿಗೆ ಆ ಮರಗಳ ಶಿರೋಭಾಗಗಳಲ್ಲಿ ಗುಲಾಬಿ ವರ್ಣದ ಹೂವುಗಳರಳಿ ಇಡೀ ಹೊಳೆಯುದ್ದಕ್ಕೂ ಮರಗಳು ಕೆಂಪು ಜಾತ್ರೆಯನ್ನೆ ನಡೆಸಿದಂತೆ ಕಂಡುಬರುತ್ತಿತ್ತು. ಮರಗಳ ಅಡಿ ಭಾಗಗಳಲ್ಲಿ ಬೆಳೆಯುತ್ತಿದ್ದ ನಾಣೆಲು ಗಿಡಗಳು ಅದೇ ಹೊತ್ತಿಗೆ ಸಿಹಿಯಾದ ಹಣ್ಣುಗಳಿಂದ ತುಂಬಿರುತ್ತಿದ್ದು, ಮರಗಳಿಂದ ಉದುರುತ್ತಿದ್ದ ಹಣ್ಣುಗಳಿಗಾಗಿ ನೀರೊಳಗೆ ಕೀಜಾಣು, ಕೂರ್ಲು ಮೀನುಗಳ ಸಂತೆ. ಚೋಂಗ ನದಿ ದಡದಲ್ಲಿ ಅಗಲವಾಗಿ ಬೆಳೆದಿದ್ದ ಬಿದಿರು ಮೆಳೆಗಳ ಎಡೆಯಲ್ಲಿ ಬೃಹತ್ ಕಾಳಿಂಗ ಸರ್ಪವನ್ನು ಕಂಡಿದ್ದ. ನದಿಯೊಳಗಿನ ವಿವಿಧ ವರ್ಣಗಳ, ಗಾತ್ರದ ಅಸಂಖ್ಯ ಮೀನುಗಳು ಅವನ ನಿತ್ಯದ ಸಂಗಾತಿಗಳು, ಜೀವದ ಗೆಳೆಯರು.

ಆ ನದಿಯ ಮರಳುದಂಡೆ ಮತ್ತು ಬಂಡೆಗಳ ಮೇಲೆ ಚೋಂಗ ಲೆಕ್ಕವಿಲ್ಲದಷ್ಟು ಬೆಳದಿಂಗಳು ಮತ್ತು ಕಾರಿರುಳ ರಾತ್ರಿಗಳನ್ನು ಕಳೆದಿದ್ದಾನೆ. ಮಳೆಗಾಲ ನದಿಗೆ ಗಾಳ ಹಾಕುವವರು, ನೀರು ಕಡಿಮೆ ಆಗುತ್ತಿದ್ದಂತೆ ಬಲೆ ಬೀಸುವವರು ಹಾಜರಾಗುತ್ತಿದ್ದು ಅವರನ್ನು ಆತ ಸಂಧಿಸುತ್ತಿದ್ದ. ಈಗ ಎಲ್ಲವೂ ಬರಡು ಬರಡು. ಬೃಹತ್ ಮರಗಳು, ಬಿದಿರ ಮೆಳೆಗಳು ಇನ್ನಿಲ್ಲವಾಗಿದೆ. ತಂಗಾಳಿಗೆ ಅಲೆ ಅಲೆಯಾಗಿ ನರ್ತಿಸುತ್ತಿದ್ದ ಭತ್ತದ ಗದ್ದೆಗಳು ಕರಗಿವೆ. ಅಡಿಕೆ, ತೆಂಗು, ರಬ್ಬರ್, ಗೇರು ಎಲ್ಲವೂ ಪೈಪೋಟಿಗೆ ಬಿದ್ದಂತೆ ಬಯಲು. ಬೆಟ್ಟ ಗುಡ್ಡಗಳ ಆಪೋಶಿಸಿ ಆ ನದಿಯ ನರಗಳಂತಿದ್ದ ಸಣ್ಣ ಝರಿ, ತೊರೆ, ತೋಡು ಚಿಮ್ಮುವ ಒರತೆಗಳ ನಿಲ್ಲಿಸಿ ಬಿಟ್ಟಿವೆ. ಮಳೆಗಾಲ, ಬೇಸಿಗೆಯಲ್ಲಿ ಸದಾ ತುಂಬಿ ಹರಿಯುತ್ತಿದ್ದ ಆ ನದಿ ಇಂದು ವಾಸಿಯಾಗದ ಭಯಂಕರ ರೋಗಕ್ಕೆ ತುತ್ತಾದ ದೇಹದಂತೆ ವರ್ಷಗಳು ಉರುಳುತ್ತಾ ಕ್ಷಯಿಸಿ ಕ್ಷಯಿಸಿ ಕ್ಷೀಣಿಸಿದೆ. ಒಂದು ದಿನ ಚೋಂಗ ಬೆಳ್ಳಂಬೆಳಿಗ್ಗೆ ನದಿಗೆ ಮುಖ ತೊಳೆಯಲು ಇಳಿದರೆ ನೀರಿನ ದೃಶ್ಯವೇ ಭೀಕರ. ಹತ್ತಾರು ಜಾತಿಯ ದೊಡ್ಡ ದೊಡ್ಡ ಮೀನುಗಳು, ಕ್ರಿಮಿ ಕೀಟಗಳು ಏಡಿ, ಇಟ್ಟಿಗಳು ಸತ್ತು ಸುತ್ತೆಲ್ಲ ದುರ್ನಾತ. ಆತ ಒಂದೇ ಸಮನೆ ದಡದುದ್ದಕ್ಕೂ ಓಡಿದ. ಎಲ್ಲೆಲ್ಲೂ ಹೆಣದ ರಾಶಿ. ಪುಟ್ಟ ಕಣ್ಣ ಪುಟ್ಟ ಮೀನೊಂದನ್ನು ಅಂಗೈಗೆ ತೆಗೆದುಕೊಂಡವನ ಕಣ್ಣಿಂದ ನೀರ ಹನಿಗಳೆರಡು ಜಾರಿವೆ.

ಊರ ದೇವಸ್ಥಾನಕ್ಕೆ ಅಲ್ಲಿಂದ ಒಂದು ಫರ್ಲಾಂಗ್ ದೂರ. ಉಟ್ಟ ಬಟ್ಟೆಯಲ್ಲೇ ಚೋಂಗ ಒಂದೇ ಸಮನೆ ಆ ಕಡೆಗೆ ಓಟಕಿತ್ತ. ಊರ ಜಾತ್ರೆಗೆ ಇನ್ನಿರುವುದು ಕೇವಲ ಒಂದು ತಿಂಗಳು. ಜಾತ್ರೆಯ ತಯಾರಿಯು ಆಗಲೇ ಶುರುವಾಗುತ್ತಿತ್ತು. ಬೆಳಗ್ಗಿನ ಪೂಜೆಗೆಂದು ಪುರೋಹಿತರು ಮನೆ ಮೆಟ್ಟಿಲು ಇಳಿಯುತ್ತಿದ್ದಂತೆ ವಿಚಿತ್ರ ಆಕೃತಿಯ ವ್ಯಕ್ತಿಯೊಂದು ದೇವಸ್ಥಾನದ ಅಂಗಣ ಪ್ರವೇಶಿಸುತ್ತಿದೆ.

"ಹೊಯ್ ಹೊಯ್ ಯಾರದು? ನಿಲ್ಲಿ ನಿಲ್ಲಿ". ಓಡುವವನು ಯಾರ ಮಾತು ಕೇಳಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಭಟ್ರು ದೂರದಲ್ಲಿದ್ದ ಕೆಲಸದವರ ಕೂಗಿದ್ದಾರೆ. ಅವರು ಬಂದು ಚೋಂಗನನ್ನು ಭೂತದ ಪಾತ್ರಿಯ ಹಿಡಿದಂತೆ ಹಿಡಿದಿದ್ದಾರೆ. ಅವರ ಕೈಯಿಂದ ಕೊಸರಿಕೊಂಡ ಆ ಮುದಿ ಜೀವ ಪ್ರಾಂಗಣ ದಾಟಿ ಬಾಗಿಲು ಮುಚ್ಚಿದ್ದ ಗರ್ಭಗುಡಿ ಎದುರಿಗೆ ಸಾಷ್ಟಾಂಗ ಎರಗಿದ. "ಓ ದೇವ್ರೇ ಅವರು ಸತ್ತೇ ಹೋಗಲಿ" – ಶಾಪದ ಮಾತು ಇಡೀ ಆವರಣದಲ್ಲಿ ಮತ್ತೆ ಮತ್ತೆ ಮಾರ್ದನಿಸಿದೆ. ಭಟ್ರು ದೂರದಿಂದಲೇ "ಆ ಶನಿಯನ್ನು ತೆಂಗಿನಮರಕ್ಕೆ ಕಟ್ಟಿ" ಎಂದು ಬೊಬ್ಬಿಟ್ಟರು. ತೆಂಗಿನಮರಕ್ಕೆ ಆತನನ್ನು ಹಗ್ಗದಿಂದ ಕಟ್ಟಿದ ಕೆಲಸದವರು, ಅವನಿಗೆ ಹುಚ್ಚುಹಿಡಿದಿದೆ ಎಂದು ಭಾವಿಸಿ ಮುಖ ಮೂತಿ ನೋಡದೆ ಬಾರಿಸಿದ್ದಾರೆ. ಭುಜ ಹೊಟ್ಟೆ ಭಾಗದಲ್ಲಿ ಚರ್ಮ ಕೆಂಪಾಗಿ ರಕ್ತ ಹೆಪ್ಪುಗಟ್ಟಿದೆ. ಈಗ ದೇವಸ್ಥಾನ ಶುದ್ಧವಾಗದೆ ಬಾಗಿಲು ತೆರೆದು ಪೂಜೆ ಮಾಡುವಂತಿಲ್ಲ.

ಪುರೋಹಿತರು ದೇವಸ್ಥಾನದ ಮೊಕ್ತೇಸರಿಗೆ ಫೋನಾಯಿಸಿದ್ದಾರೆ. ವಿಷಯ ಕಿವಿಯಿಂದ ಕಿವಿಗೆ ಹರಡಿ ಅಲ್ಲಿ ಸೇರಿದ್ದ ಜನ ನೂರಾರು. ಇನ್ನೇನು ವಿಚಾರಣೆ ಶುರುವಾಗಬೇಕು ಯಾರೋ 'ಇದೇನು ದುರ್ನಾತ" ಎಂದರು. ಪಕ್ಕದವ "ಬಿದ್ದ ಪೆಟ್ಟಿಗೆ ಹೇತುಕೊಂಡಿರಬಹುದು" ಎಂದ. ಮೊಕ್ತೇಸರರು "ಜಾತೆಗೆ ಮೊದಲು ಇದೇನು ಶನಿ, ಅಪಶಕುನ... ಜಾತಿಗೆಟ್ಟವ ಇಲ್ಲಿಗೆ ಒಳಗೆ ಬಂದದ್ದಾದರು ಹೇಗೆ?" ಎಂದುಕೊಂಡರು. ಕಾರ್ಯದರ್ಶಿಗಳು, "ಮೊದಲು ಅವನಿಗೆ ನಾಲ್ಕು ಬಾರಿಸಿ" ಎಂದರು. ಕೆಲಸದವನೊಬ್ಬ "ಬೆಳಿಗ್ಗೆ ಬಿಟ್ಟು ಆಗಿದೆ" ಎಂದ. ದುರ್ನಾತ ಇನ್ನಷ್ಟು ಹೆಚ್ಚುತ್ತಿತ್ತು. ಅಲ್ಲೇ ಹತ್ತಾರು ಮೀಟರ್ ದೂರದಲ್ಲಿದ್ದ ಹೊಳೆಯಂಚಿನಿಂದಲೇ ಅದು ಬಂದಂತಿತ್ತು.

ಎಲ್ಲರೂ ಮೂಗಿಗೆ ಬಾಯಿಗೆ ಕೈ ಮುಚ್ಚಿ ನಿಂತಿದ್ದರು. ಕೆಲವರು ಮೂಗಿಗೆ ಕೈ ವಸ್ತ್ರ ಹಿಡಿದಿದ್ದರೆ, ಮತ್ಯಾರೋ ಲುಂಗಿ ಎತ್ತಿ ಮೂಗು ಒತ್ತಿ ಹಿಡಿದಿದ್ದರು. ಪಿಸುಮಾತುಗಳ ಮಧ್ಯೆ ಭಟ್ರು "ನಾನು ಬೆಳಿಗ್ಗೆ ಸ್ನಾನಕ್ಕೆ ಹೋಗುವಾಗ ನೀರ ದೇವರ ಗುಂಡಿಯಲ್ಲಿ ದೇವರ ಮೀನುಗಳು ಸತ್ತು ತೇಲುತ್ತಿರುವುದನ್ನು ಕಂಡೆ" ಎಂದರು.

ಬಿಸಿಲೇರುತ್ತಿದ್ದ ಹಾಗೆ ಚೋಂಗನ ನರಳಾಟ ಹೆಚ್ಚುತ್ತಾ ಹೋಗುತ್ತಿತ್ತು. ಕಣ್ಣು ಕತ್ತಲೆ ಬಂದಂತಾಗಿ "ನೀರು ನೀರು" ಎಂದು ಅರಚಿದ್ದಾನೆ. ಕೆಲಸದವನೊಬ್ಬ ಅಲ್ಲೇ ಹತ್ತಿರದಲ್ಲಿದ್ದ ಟ್ಯಾಪಿನಿಂದ



